ಏತ ನೀರಾವರಿ ಯೋಜನೆ

401 (728) ಶ್ರೀ ಮಂಜು. ಎ (ಅರಕಲಗೂಡು):- ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಅರಕಲಗೂಡು ಮತಕ್ಷೇತ್ರದಲ್ಲಿ ಏತನೀರಾವರಿ ಯೋಜನೆ ಮಂಜೂರಾಗಿದ್ದು, ಅವುಗಳಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಪ್ರಾರಂಭವಾಗಿವೆ?

ಆ) ಇವುಗಳಲ್ಲಿ ಕೆಲವು ಕಡೆ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಬಾಕಿ ಉಳಿದಿರುವ ಏತ ನೀರಾವರಿಯನ್ನು ಕೂಡಲೇ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಗೋವಿಂದ ಎಂ. ಕಾರಜೋಳ(ಮಾನ್ಯ ಸಣ್ಣ ನೀರಾವರಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು):-

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯ ಹಾಸನ ಜಿಲ್ಲೆ, ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ 04 ಏತ ನೀರಾವರಿ ಯೋಜನೆಗಳಿದ್ದು,

(1) ಅರಕಲಗೂಡು ತಾಲ್ಲೂಕು ವಡ್ಡರಹಳ್ಳಿ ಹರಿಜನ ಕಾಲೋನಿಯ ಪರಿಶಿಷ್ಟ ಜಾತಿಯವರ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಏತ ನೀರಾವರಿ ಯೋಜನೆ ಕಾಮಗಾರಿ ಪ್ರಗತಿಯಲ್ಲಿದೆ.

(2) ಅರಕಲಗೂಡು ಮತ ಕ್ಷೇತ್ರದ ಹೊಳೆನರಸೀಪುರ ತಾಲ್ಲೂಕು ಕೋಡಿಹಳ್ಳಿ ಗ್ರಾಮದ ಏತ ನೀರಾವರಿ ಯೋಜನೆಗಳಿದ್ದು ಇವುಗಳಲ್ಲಿ ಕೋಡಿಹಳ್ಳಿ ಗ್ರಾಮದ ಏತ ನೀರಾವರಿ ಯೋಜನೆಯು ಪ್ರಾರಂಭವಾಗಿದ್ದು, ಸದರಿ ಯೋಜನೆಯಿಂದ 69 ಹೆಕ್ಟೇರ್ ಪ್ರದೇಶ ನೀರಾವರಿ ಸೌಲಭ್ಯ ಕಲ್ಪಿಸಲಾಗಿದೆ.

(3) ಬೆಟ್ಟಸೋಗೆ ಮತ್ತು ಕಾಡನೂರು ಏತ ನೀರಾವರಿ ಯೋಜನೆಗಳು ಬೃಹತ್ ನೀರಾವರಿ ಪ್ರದೇಶದಲ್ಲಿ ಬಂದ ಕಾರಣ ನಿಷ್ಕ್ರಿಯಗೊಳಿಸಲಾಗಿದೆ.

ಆ) ಅರಕಲಗೂಡು ತಾಲ್ಲೂಕು ವಡ್ಡರಹಳ್ಳಿ ಹರಿಜನ ಕಾಲೋನಿಯ ಪರಿಶಿಷ್ಟ ಜಾತಿಯವರ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಏತ ನೀರಾವರಿ ಯೋಜನೆಯು 2008-09ನೇ ಸಾಲಿನ ವಿಶೇಷ ಘಟಕ ಯೋಜನೆ ಅಡಿಯಲ್ಲಿ ರೂ. 20.00 ಲಕ್ಷಗಳಿಗೆ

ಮಂಜೂರಾಗಿದ್ದು ಪ್ರಸ್ತುತ ಸದರಿ ಏತ ನೀರಾವರಿ ಯೋಜನೆಯ ಸಿವಿಲ್ ಕಾಮಗಾರಿ ಪೂರ್ಣಗೊಂಡಿದ್ದು, ವಿದ್ಯುತ್ ಸಂಪರ್ಕದ ಕಾಮಗಾರಿ ಪ್ರಗತಿಯಲ್ಲಿದೆ. ಸದರಿ ಕಾಮಗಾರಿಗೆ ನವೆಂಬರ್ 2011ರ ಅಂತ್ಯಕ್ಕೆ ರೂ. 14.56 ಲಕ್ಷಗಳು ವೆಚ್ಚವಾಗಿದೆ.

ಅರಕಲಗೂಡು ತಾಲ್ಲೂಕು ಬೆಟ್ಟಸೋಗೆ ಗ್ರಾಮದ ಏತ ನೀರಾವರಿ ಯೋಜನೆಯು ಹೇಮಾವತಿ ಜಲಾಶಯ ಯೋಜನೆಯ ಅಚ್ಚುಕಟ್ಟಿನಲ್ಲಿ ವಿಲೀನಗೊಳಿಸಿರುವುದರಿಂದ ಸಧರಿ ಯೋಜನೆಯನ್ನು ನಿಷ್ಕ್ರಿಯಗೊಳಿಸಲಾಗಿದೆ.

ಅರಕಲಗೂಡು ತಾಲ್ಲೂಕು ಕಾಡನೂರು ಗ್ರಾಮದ ಏತ ನೀರಾವರಿ ಯೋಜನೆಯು ಹಾರಂಗಿ ಜಲಾಶಯ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ವಿಲೀನವಾಗಿರುವುದರಿಂದ ಸದರಿ ಯೋಜನೆಯನ್ನು ನಿಷ್ಕ್ರಿಯಗೊಳಿಸಲಾಗಿದೆ.

ಪ್ರಸ್ತುತ ಅರಕಲಗೂಡು ಮತ ಕ್ಷೇತ್ರದ ವ್ಯಾಪ್ತಿಯಲ್ಲಿ ವಡ್ಡರಹಳ್ಳಿ ಹರಿಜನ ಕಾಲೋನಿಯ ಪರಿಶಿಷ್ಟ ಜಾತಿಯವರ ಜಮೀನಿಗೆ ನೀರಾವರಿ ಸೌಲಭ್ಯ ಕಲ್ಪಿಸುವ ಏತ ನೀರಾವರಿ ಯೋಜನೆಯನ್ನು ಪ್ರಸಕ್ತ ಸಾಲಿನ ಅಂತ್ಯದೊಳಗೆ ಪೂರ್ಣಗೊಳಿಸಿ ಅಚ್ಚುಕಟ್ಟುದಾರರಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಉದ್ದೇಶಿಸಲಾಗಿದೆ.

ಕ್ರಿಯಾ ಯೋಜನೆಗೆ ಅನುಮೋದನೆ

402 (279) ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು):- ಮಾನ್ಯ ಜಲಸಂಪನ್ಮೂಲ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:-

ಅ) ಹುಣಸೂರು ತಾಲ್ಲೂಕು ಹನಗೂಡು ಅಣೆಕಟ್ಟೆ, ಅದರ ಸರಪಳಿ ನಾಲೆ ಹಾಗೂ ಕೆರೆಗಳ ಅಭಿವೃದ್ಧಿ ಹಾಗೂ ನಿರ್ವಹಣೆಗಾಗಿ ಸರ್ಕಾರದ ವತಿಯಿಂದ 2008-09ನೇ ಸಾಲಿನಿಂದ ಈವರೆಗೆ ಬಿಡುಗಡೆ ಮಾಡಿರುವ ಅನುದಾನವೆಷ್ಟು ; (ವಾರ್ಷಿಕ ಹಾಗೂ ಕಾಮಗಾರಿವಾರು ವಿವರ ನೀಡುವುದು);

ಆ) 2011-12ನೇ ಸಾಲಿನಲ್ಲಿ ಬಿಡುಗಡೆಗೊಂಡ ಅನುದಾನಕ್ಕೆ ಕ್ರಿಯಾ ಯೋಜನೆ ಹಾಗೂ ಅಂದಾಜು ಪಟ್ಟಿ ಸಲ್ಲಿಸಲಾಗಿದೆಯೇ ; ಪ್ರಸ್ತಾವನೆ ಸ್ವೀಕೃತಗೊಂಡಿದ್ದಲ್ಲಿ ಅದರ ವಿವರ ನೀಡುವುದು ಹಾಗೂ ಪ್ರಸ್ತಾವನೆಗೆ ಅನುಮೋದನೆ ನೀಡದೆ ಇರಲು ಕಾರಣವೇನು ;

ಇ) ಹನಗೂಡು ಅಣೆಕಟ್ಟು ಹಾಗೂ ನಾಲೆಗಳು 400 ವರ್ಷಕ್ಕೂ